# ಓದುವ ಪರೀಕ್ಷೆ – 1

ಆವೃತ್ತಿ – 1

## ಕಥೆ

ಸುರೇಶನು ಮಾವನ ಜೊತೆ ಸಂತೆಗೆ ಹೋದನು. ಅಲ್ಲಿ ಸುತ್ತಾಡುತ್ತಿದ್ದಾಗ ಬಿಸಿಲು ಮತ್ತು ಸೆಖೆಯಿಂದ ಸುರೇಶನ ಬಾಯಿ ಒಣಗಿ ದಣಿವಾಯಿತು. ದಣಿವಾರಿಸಿಕೊಳ್ಳಲು ಸುರೇಶ ಅವನ ಮಾವನನ್ನು ನೀರು ಕೇಳಿದ. ಆಗ ಅವನ ಮಾವ ಸಂತೆಯ ಸುತ್ತಮುತ್ತ ನೀರು ಹುಡುಕಿದರು. ಆಗ ಅವರಿಗೆ ಒಂದು ದೊಡ್ಡ ಬುಟ್ಟಿ ಕಾಣಿಸಿತು. ಆ ಬುಟ್ಟಿಯ ತುಂಬ ಎಳನೀರು ಇರುವುದನ್ನು ಕಂಡು ನೀರು ಸಿಕ್ಕಿತು ಎಂದರು. ನಂತರ ಸುರೇಶ ಮತ್ತು ಅವನ ಮಾವ ಎಳನೀರನ್ನು ಕುಡಿದರು. ಸುರೇಶನಿಗೆ ಈಗ ತುಂಬ ಸಂತೋಷವಾಯಿತು. ಅಷ್ಟರಲ್ಲಿ ಸುರೇಶನ ಮಾವ ಹೇಳಿದರು, ನಡೆ ಈಗ ಮನೆಗೆ ಹೋಗೋಣ ಸಂಜೆಯಾಯಿತು.

## ಪ್ಯಾರಾ

ಸೀಮಾಳ ಊರಿನಲ್ಲಿ ಬಹಳ ನವಿಲುಗಳು ಇವೆ

ನವಿಲುಗಳು ನೋಡಲು ಬಹಳ ಸುಂದರವಾಗಿವೆ

ಅವುಗಳು ನದಿಯ ಪಕ್ಕ ಗರಿ ಬಿಚ್ಚಿ ನರ್ತಿಸುತ್ತವೆ

ನವಿಲುಗಳನ್ನು ನೋಡಲು ಬಂದ ಜನರು ಖುಷಿಪಡುತ್ತಾರೆ

## ಪ್ಯಾರಾ

ಮೋಹನನ ಬಳಿ ಒಂದು ದೊಡ್ಡ ಕುದುರೆ ಇದೆ

ಅದು ಬಿಳಿ ಬಣ್ಣದ ಕುದುರೆ

ಬಿಳಿ ಬಣ್ಣದ ಕುದುರೆ ಬಹಳ ವೇಗವಾಗಿ ಓಡುತ್ತದೆ

ಕುದುರೆ ಮೋಹನನಿಗೆ ಬಹಳ ಸಹಾಯ ಮಾಡುತ್ತದೆ

# ಓದುವ ಪರೀಕ್ಷೆ – 1

ಆವೃತ್ತಿ – 1

## ಅಕ್ಷರ

ಮ ರ ಥ

ಹ ಶ

ಲ ಬ ನ

ಕ ಫ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು

## ಪದ

ಹಾಡು ಋಷಿ

ಮಣಿ

ಕಾಳು ಮೋಡ

ಕಿವಿ ಜೈಲು

ಜೋರು

ಕೋತಿ ಗಾಯ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು

# ಓದುವ ಪರೀಕ್ಷೆ – 2

## ಕಥೆ

ಅಜ್ಜ ಮತ್ತು ರಾಜು ಪ್ರತಿದಿನ ನದಿಗೆ ಹೋಗುತ್ತಿದ್ದರು. ಒಂದು ದಿನ ಅಜ್ಜ ನದಿಯಲ್ಲಿ ಈಜಲು ಇಳಿದರು. ಈಜಲು ಬರದಿದ್ದ ಕಾರಣ ರಾಜು ದಡದಲ್ಲಿಯೇ ಕುಳಿತುಕೊಂಡನು. ಅಜ್ಜ ಈಜುವುದನ್ನು ನೋಡಿ ಅವನಿಗೂ ಈಜುವ ಆಸೆಯಾಯಿತು. ನಿಧಾನವಾಗಿ ಅವನು ನದಿಯಲ್ಲಿ ಇಳಿದನು. ನೀರಿನಲ್ಲಿ ಕೈ–ಕಾಲುಗಳನ್ನು ಬಡಿದನು. ಇದನ್ನು ಗಮನಿಸಿದ ಅಜ್ಜ ರಾಜುವಿಗೆ ಈಜಲು ಕಲಿಸಿದರು. ಇದರಿಂದ ಅವನಿಗೆ ಬಹಳ ಸಂತೋಷವಾಯಿತು. ಪ್ರತಿದಿನ ಅವನು ನದಿಗೆ ಹೋಗಿ ಈಜುವ ಅಭ್ಯಾಸ ಮಾಡಿದನು. ಕೆಲವೇ ದಿನಗಳಲ್ಲಿ ಪೂರ್ತಿಯಾಗಿ ಈಜಲು ಕಲಿತನು. ಈಗ ಅಜ್ಜ ಮತ್ತು ರಾಜು ಇಬ್ಬರೂ ಒಟ್ಟಾಗಿ ಸೇರಿ ಈಜುವರು.

ಜುಲೈ – 2

## ಪ್ಯಾರಾ

ರಮೇಶನ ಮನೆಯಲ್ಲಿ ಒಂದು ಹಸು ಇದೆ
ಪ್ರತಿದಿನ ಅವನು ಹಸಿರು ಮೇವು ಹಾಕುವನು
ಹಸು ಮುಂಜಾನೆ ಮತ್ತು ಸಂಜೆ ಹಾಲು ಕೊಡುವುದು
ಅವನು ಹಾಲು ಮಾರಿ ಹಣ ಸಂಪಾದಿಸುವನು

## ಪ್ಯಾರಾ

ಈ ವರುಷ ಅತಿಯಾಗಿ ಮಳೆ ಸುರಿದಿದೆ
ಮಳೆ ಬಂದು ನದಿಗಳಲ್ಲಿ ನೀರು ತುಂಬಿದೆ
ಎಲ್ಲಾ ಹೊಲ ಗದ್ದೆಗಳಲ್ಲಿ ನೀರು ಹರಿದಿದೆ
ಇದರಿಂದ ರೈತರಿಗೆ ತುಂಬಾ ಸಂತಸ ತಂದಿದೆ

# ಓದುವ ಪರೀಕ್ಷೆ – 2

ಆವೃತ್ತಿ – 2

## ಅಕ್ಷರ

ದ ಕ ಚ

ಬ ಲ

ಥ ಹ ತ

ಮ ಖ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು

## ಪದ

ನಾಯಿ ಕೋತಿ

ಗೂಡು

ಕುರಿ ಮೈನಾ

ಕೆನೆ ಟೋಪಿ

ದಿನ

ಬೀಗ ಮೋಸ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು

# ಓದುವ ಪರೀಕ್ಷೆ – 3

ಆವೃತ್ತಿ - 3

## ಕಥೆ

ರಮೇಶನು ತೋಟಕ್ಕೆ ವಿಹಾರಕ್ಕಾಗಿ ಹೋದನು. ಅಲ್ಲಿ ಕೋಗಿಲೆಯು ಇಂಪಾಗಿ ಕೂಗುತ್ತಿತ್ತು. ರಮೇಶನು ಕೋಗಿಲೆಯ ಧ್ವನಿಯನ್ನು ಅನುಕರಿಸಿ ತಾನೂ ಕೋಗಿಲೆಯಂತೆ ಕೂಗಿದ. ಇದನ್ನು ಕೇಳಿದ ಕೋಗಿಲೆಯು ಇದ್ಯಾರು ನನ್ನ ಹಾಗೆ ಕೂಗುತ್ತಿರುವರು ಎಂದು ಯೋಚಿಸಿ ಇನ್ನೂ ಜೋರಾಗಿ ಕೂಗಿತು. ಕೋಗಿಲೆಯ ಇಂಚರ ಕೇಳಿದ ರಮೇಶನು ಅದನ್ನು ಅನುಕರಿಸಿ ಇನ್ನಷ್ಟು ಏರು ಧ್ವನಿಯಲ್ಲಿ ಕೂಗಿದ. ಹೀಗೆ ಒಬ್ಬರನ್ನೊಬ್ಬರು ಅಣಕಿಸುತ್ತಾ ಕೋಗಿಲೆ ಮತ್ತು ರಮೇಶನು ಮಧುರವಾಗಿ ಹಾಡುತ್ತಿದ್ದರು. ಅಷ್ಟರಲ್ಲಿ ಸಂಜೆ ಆಯಿತು. ರಮೇಶನು ಮನೆಗೆ ಹೋಗಲು ಸಿದ್ಧನಾದನು. ಕೋಗಿಲೆ ಹಾರಿ ಹೋಯಿತು. ರಮೇಶ ಮರಳಿ ಮನೆಗೆ ಬಂದನು.

## ಪ್ಯಾರಾ

ರಾಮಪುರ ಎಂಬ ಊರಿನಲ್ಲಿ ಒಂದು ನದಿ ಇದೆ
ಆ ನದಿಯ ನೀರು ಬಹಳ ಸಿಹಿಯಾಗಿದೆ
ಮಕ್ಕಳು ನದಿಯ ಹತ್ತಿರ ಆಟ ಆಡುತ್ತಾರೆ
ನದಿಯ ಅಕ್ಕ ಪಕ್ಕ ಬಹಳ ಹೊಲ ಗದ್ದೆಗಳಿವೆ

## ಪ್ಯಾರಾ

ಅಕ್ಕ ಮುಂಜಾನೆ ಊರಿನ ಸಂತೆಗೆ ಹೋದಳು
ಅಲ್ಲಿ ಹಲವು ರೀತಿಯ ತರಕಾರಿ ತಂದಳು
ಅಕ್ಕ ಸಂಜೆ ಎಲ್ಲರಿಗೂ ಬಿಸಿ ಬೋಂಡ ಕೊಡುವಳು
ನಾವೆಲ್ಲರೂ ಬಿಸಿ ಬೋಂಡ ತಿನ್ನುವೆವು

# ಓದುವ ಪರೀಕ್ಷೆ – 3

ನಮೂನೆ – 3

## ಅಕ್ಷರ

ನ ರ ಮ

ಚ ಸ

ಪ ಗ ದ

ಲ ಥ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು



## ಪದ

ಗಾಯ ರೋಗ

ಜಾಣ

ಕವಿ ಸಾಲ

ನೌಕೆ ತುದಿ

ಹಡೆ

ಪೈರು ತೋಳ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು

# ಓದುವ ಪರೀಕ್ಷೆ – 4

ನಮೂನೆ – 4

## ಕಥೆ

ರಾಣಿ ಮತ್ತು ವಾಣಿ ಮರವನ್ನು ಹತ್ತಿದರು. ಆಗ ಅವರಿಗೆ ನಾಯಿ ಬೊಗಳುವ ಧ್ವನಿ ಕೇಳಿಸಿತು. ನಾಯಿಯ ಧ್ವನಿಯನ್ನು ಕೇಳಿ ಇಬ್ಬರೂ ಗೆಳತಿಯರು ಹೆದರಿದರು. ನಾಯಿ ಮರದ ಕೆಳಗೆಯೇ ಇತ್ತು. ನಾಯಿಯು ಅವರನ್ನು ನೋಡಿ ಒಂದೇ ಸಮನೆ ಬೊಗಳುತ್ತಿತ್ತು. ಇಬ್ಬರೂ ಗೆಳತಿಯರು ಭಯದಿಂದ ಮರದ ಮೇಲೆಯೇ ಕುಳಿತಿದ್ದರು. ಸ್ವಲ್ಪ ಸಮಯದ ನಂತರ ಮರದ ಹತ್ತಿರ ಅಜ್ಜಿ ಬಂದರು. ಅಜ್ಜಿಯನ್ನು ನೋಡಿ ನಾಯಿ ಸುಮ್ಮನಾಯಿತು. ಮರದ ಮೇಲೆ ಹುಡುಗಿಯರು ಕುಳಿತಿರುವುದನ್ನು ನೋಡಿದ ಅಜ್ಜಿ ಹೆದರಬೇಡಿ, ಅದು ನಾನು ಸಾಕಿದ ನಾಯಿ, ನೀವಿಬ್ಬರೂ ಕೆಳಗೆ ಇಳಿಯಿರಿ ಎಂದರು. ನಂತರ ಅವರಿಬ್ಬರು ಧೈರ್ಯವಾಗಿ ಮರದಿಂದ ಕೆಳಗೆ ಇಳಿದರು.

## ಪ್ಯಾರಾ

ಮರದ ಮೇಲೆ ಒಂದು ದೊಡ್ಡ ಗೂಡಿದೆ
ಆ ಗೂಡಿನಲ್ಲಿ ಎಲ್ಲಾ ಪಕ್ಷಿಗಳು ಒಟ್ಟಾಗಿ ವಾಸವಾಗಿವೆ
ಮುಂಜಾನೆ ಎಲ್ಲಾ ಪಕ್ಷಿಗಳು ಚಿಲಿಪಿಲಿ ಗುಟ್ಟುತ್ತವೆ
ಪಕ್ಷಿಯ ಕಲರವದಿಂದ ಎಲ್ಲರೂ ಎಚ್ಚರಗೊಳ್ಳುತ್ತಾರೆ

## ಪ್ಯಾರಾ

ರಾಮು ಮತ್ತು ಸೋಮು ಸಂತೆಗೆ ಹೋದರು
ಅಲ್ಲಿ ಹಲವು ತರಹದ ಅಂಗಡಿಗಳು ಇದ್ದವು
ಸಂತೆಯಲ್ಲಿ ರಾಮು ಸಿಹಿ ತಿಂಡಿ ಕೊಂಡ
ಸೋಮು ಬುಗುರಿ ಹಾಗೂ ದಾರವನ್ನು ಕೊಂಡ

# ಓದುವ ಪರೀಕ್ಷೆ – 4

ಅಭ್ಯಾಸ – 4

## ಅಕ್ಷರ

ದ ಕ ಚ

ಬ ಲ

ಥ ಹ ತ

ಮ ಖ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು

## ಪದ

ಕೀಟ ನೈಜ

ದಾರ

ಪೂರಿ ಜಾಜಿ

ತೂಕ ದಿನ

ಹೊರೆ

ವಾಸ ಮೈನ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು